# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 46 (81) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಬಿ.ಎಂ.ಫಾರೂಖ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 04.07.2023 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಶಕಗಳ ಹಿಂದೆಯೇ ಸ್ವಾಧೀನಪಡಿಸಲಾದ ಕೆನರಾ ಇಂಡಸ್ಟ್ರಿಯಲ್ ಏರಿಯಾದ ಭೂಮಿಯನ್ನು ಉದ್ದಿಮೆಗಳಿಗೆ ಯಾವಾಗ ಹಂಚಿಕೆ ಮಾಡಲಾಗುವುದು; ಇದರಿಂದ ಅಭಿವೃದ್ಧಿಗೆ ಆದಾಯಕ್ಕೆ ಉದ್ಯೋಗಾವಕಾಶಗಳಿಗೆ ಶೀಘ್ರಚಾಲನೆ ದೊರೆತು ಆರ್ಥಿಕತೆ, ಜನಜೀವನ ಮಟ್ಟ ಸುಧಾರಿಸುವತ್ತ ಸರ್ಕಾರ ಕಾರ್ಯಯೋಜನೆಗಳನ್ನು ರೂಪಿಸುವುದೇ; (ವಿವರ ನೀಡುವುದು) | • ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಕೆನರಾ 1ನೇ ಹಂತದ ಕೈಗಾರಿಕಾ ಪ್ರದೇಶಕ್ಕಾಗಿ ಬಂಟ್ವಾಳ ತಾಲ್ಲೂಕು(ಉಲ್ಲಾಳ ತಾಲ್ಲೂಕು) ಕುರ್ನಾಡು, ಚೇಳೂರು, ಬಾಳೇಪುಣಿ ಮತ್ತು ಹಿರಾ ಗ್ರಾಮಗಳಲ್ಲಿನ ಒಟ್ಟು 585.66 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕೆ.ಐ.ಎ.ಡಿ. ಕಾಯ್ದೆ 1966 ಕಲಂ 28 (4) ರಡಿ ದಿನಾಂಕ:07-05-2008 ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಜಮೀನುಗಳಿಗೆ ಎಕರೆಯೊಂದಕ್ಕೆ ರೂ.10 ಲಕ್ಷದಂತೆ ಪರಿಹಾರ ದರ ನಿಗಧಿಪಡಿಸಲಾಗಿದೆ. ಸದರಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಜಮೀನನ್ನು ಕಲಂ 28(8) ರಡಿ ಮಂಡಳಿಗೆ ಹಸ್ತಾಂತರಿಸಲಾಗಿದೆ. ಸದರಿ ಕೈಗಾರಿಕಾ ಪ್ರದೇಶದ ವಿನ್ಯಾಸ ನಕ್ಷೆಗೆ ದಿನಾಂಕ:27-09-2010 ರಂದು ನಡೆದ ಕೆ.ಐ.ಎ.ಡಿ. ಮಂಡಳಿ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ.<br>• ಮಂಡಳಿಯು ಸದರಿ ಕೈಗಾರಿಕಾ ಪ್ರದೇಶದಲ್ಲಿ ಕರ್ನಾಟಕ ರಾಜ್ಯ ಮೀಸಲು ಪಡೆ ಹಾಗೂ ಜಿಲ್ಲಾ ಕಾರಾಗೃಹಕ್ಕಾಗಿ ಒಟ್ಟಾರೆ 112.89 ಎಕರೆ ಜಮೀನನ್ನು ಹಂಚಿಕೆ ಮಾಡಿರುತ್ತದೆ.<br>• ಉಳಿಕೆ ಜಮೀನು ಗುಡ್ಡ, ಇಳಿಜಾರು ಪ್ರದೇಶ ಹೊರತುಪಡಿಸಿ ಕೇಂದ್ರ ಸರ್ಕಾರದ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಿಂದ ಪರಿಸರ ವಿಮೋಚನಾ ಪತ್ರ (Environmental Clearance) ಪಡೆದ ನಂತರ ಸದರಿ ಕೈಗಾರಿಕಾ ಪ್ರದೇಶದಲ್ಲಿ ಉದ್ದಿಮೆದಾರರಿಗೆ ಹಂಚಿಕೆ ಮಾಡಲು ಕ್ರಮಕೈಗೊಳ್ಳಲಾಗುತ್ತದೆ.<br>• ಮಂಡಳಿಯು ಈಗಾಗಲೇ ಸದರಿ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಿದ ಜಮೀನಿನ ಭೂ ಮಾಲೀಕರಿಗೆ ನಿಗಧಿಪಡಿಸಿದ ಭೂಪರಿಹಾರವನ್ನು ಪಾವತಿಸಿ ಮಂಡಳಿಯ ವಶಕ್ಕೆ ಪಡೆಯಲಾಗಿರುತ್ತದೆ. |
| ಆ) | KIADB ಸ್ವಾಧೀನದಲ್ಲಿರುವ ಗುಡ್ಡ ಇಳಿಜಾರಿನಿಂದ ತುಂಬಿದ ಅರ್ಧದಷ್ಟು ಭೂಮಿ ಉದ್ದಿಮೆಗಳಿಗೆ ಸೂಕ್ತವಲ್ಲವೆಂದು ತಿಳಿದಿದ್ದು, ಇಂತಹ ಭೂಮಿಯ ಕುರಿತು ಸರ್ಕಾರದ ನಿಲುವು ಧೋರಣೆಗಳೇನು; ಜಮೀನು ಕೊಟ್ಟ ರೈತರಿಗೆ ಸರ್ಕಾರದ ನಿಲುವೇನು; | |

| | | |
|---|---|---|
| **ಇ)** | 2ನೇ ಹಂತದಲ್ಲಿ ಸ್ವಾಧೀನಪಡಿಸಲಾದ 125 ಎಕರೆ ಹಂಚಿಕೆಗೆ ಯೋಗ್ಯವಾಗಿಲ್ಲವೆಂದು KIADB ಯವರೇ ಹೇಳಿದ ಮೇಲೆ ಈ ಜಮೀನನ್ನು ಇತರೆ ಯೋಜನೆಗಳಿಗೆ ಅಥವಾ ರೈತರಿಗೆ ಮರುಹಂಚಿಕೆ ಮಾಡುವ ಕುರಿತು ಸರ್ಕಾರದ ನಿಲುವು/ಯೋಜನೆಗಳೇನು? ವಿವರ ನೀಡುವುದು. | • ಕೆನರಾ 2ನೇ ಹಂತದ ಕೈಗಾರಿಕಾ ಪ್ರದೇಶಕ್ಕಾಗಿ ಬಾಳೇಪುಣೆ ಮತ್ತು ಕುರ್ನಾಡು ಗ್ರಾಮಗಳಲ್ಲಿನ ಒಟ್ಟು 125-29 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕೆಐಎಡಿ ಕಾಯ್ದೆ ಕಲಂ 28(4) ರಡಿ ದಿನಾಂಕ:04-07-2012ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಜಮೀನುಗಳಿಗೆ ಎಕರೆ ಒಂದಕ್ಕೆ ರೂ.15.00 ಲಕ್ಷ ದಂತೆ ಪರಿಹಾರ ದರ ನಿಗಧಿಪಡಿಸಲಾಗಿದೆ. ಸದರಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಜಮೀನನ್ನು ಕಲಂ 28(8)ರಡಿ ಮಂಡಳಿಗೆ ಹಸ್ತಾಂತರಿಸಲಾಗಿದೆ.<br>• ಮಂಡಳಿಯು ಸದರಿ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಿದ ಜಮೀನಿನ ಭೂ ಮಾಲೀಕರಿಗೆ ನಿಗಧಿಪಡಿಸಿದ ಭೂಪರಿಹಾರವನ್ನು ಪಾವತಿಸಿ ಮಂಡಳಿಯ ವಶಕ್ಕೆ ಪಡೆದಿದ್ದು, ರೈತರಿಗೆ ಮರಳಿ ಜಮೀನನ್ನು ನೀಡಲು ಕೆ.ಐ.ಎ.ಡಿ. ಕಾಯ್ದೆಯಡಿಯಲ್ಲಿ ಅವಕಾಶವಿರುವುದಿಲ್ಲ.<br>• ಕೆನರಾ 2ನೇ ಹಂತದ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿ ಮುಂಬರುವ ಯೋಜನೆಗಳಿಗೆ/ ಉದ್ದಿಮೆದಾರರಿಗೆ ಹಂಚಿಕೆ ಮಾಡಲು ಕ್ರಮವಹಿಸಲಾಗುತ್ತದೆ. |

**ಸಂಖ್ಯೆ: ಸಿಐ 121 ಐಎಪಿ 2023**

**(ಎಂ.ಬಿ.ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ**
**ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**